KADG320019462026

**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ. ದ. ನ್ಯಾ. ದಂ. ನ್ಯಾಯಾಲಯ, ಹರಿಹರ**

**ಉಪಸ್ಥಿತರು : ಶ್ರೀ ಬೀರಪ್ಪ ಕಾಂಬ್ಳೆ,**
**ಬಿ.ಎ,. ಎಲ್ಎಲ್.ಬಿ.**
**ಪ್ರಧಾನ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರ. ದ. ನ್ಯಾ. ದಂ. ನ್ಯಾಯಾಲಯ, ಹರಿಹರ**
**C/c 2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರ. ದ. ನ್ಯಾ. ದಂ. ನ್ಯಾಯಾಲಯ, ಹರಿಹರ**

**ಅಪರಾಧ ಪ್ರಕರಣ ಸಂಖ್ಯೆ : 1227/2026**

**ದಿನಾಂಕಃ 19 ನೇ ಆಗಸ್ಟ್, 2026 ರಂದು**

**ಫಿರ್ಯಾದುದಾರರುಃ**

ಸರ್ಕಾರದ ಪರವಾಗಿ ಮಲೇಬೆನ್ನೂರು ಪೊಲೀಸ್ ಠಾಣೆ,
ಹರಿಹರ.

**(ಅಭಿಯೋಜನ ಪರ, ಸರ್ಕಾರಿ ಸಹಾಯಕ ಅಭಿಯೋಜಕರು)**

**ವಿರುದ್ಧ**

**ಆರೋಪಿತರು :**

ಆರೋಪಿ ಸಂ.1: ಬೀರಪ್ಪ ತಂದೆ ಸಿದ್ದಲಿಂಗಪ್ಪ,
ವಯಸ್ಸು 56 ವರ್ಷ, ಕೃಷಿಕರು,

ಆರೋಪಿ ಸಂ.2: ಸಿದ್ದಪ್ಪ ಭಾನುವಳ್ಳಿ ತಂದೆ ಸಿದ್ದಲಿಂಗಪ್ಪ ಭಾನುವಳ್ಳಿ,
ವಯಸ್ಸು 54 ವರ್ಷ, ಕೃಷಿಕರು,

ಆರೋಪಿ ಸಂ.3: ದೇವರಾಜ ತಂದೆ ಭಾನುವಳ್ಳಿ ಬೀರಪ್ಪ,
ವಯಸ್ಸು 25 ವರ್ಷ, ಕೃಷಿಕರು,

ಆರೋಪಿ ಸಂ.4: ನಾಗರಾಜ ತಂದೆ ಭಾನುವಳ್ಳಿ ಸಿದ್ದಪ್ಪ,
ವಯಸ್ಸು 28 ವರ್ಷ, ಕೃಷಿಕರು,

ಆರೋಪಿ ಸಂ.5: ಬೀರೇಶ ತಂದೆ ಭಾನುವಳ್ಳಿ ಸಿದ್ದಪ್ಪ,
ವಯಸ್ಸು 24 ವರ್ಷ, ಕೃಷಿಕರು,
ಎಲ್ಲರ ವಾಸಃ ಕುಣೆಬೆಳಕೆರೆ ಗ್ರಾಮ, ಹರಿಹರ ತಾಲ್ಲೂಕು,
ದಾವಣಗೆರೆ ಜಿಲ್ಲೆ.

**(ಆರೋಪಿತರ ಪರ ಶ್ರೀ ಎನ್.ಬಿ., ವಕೀಲರು)**

| | |
|---|---|
| ಘಟನೆ ಸಂಭವಿಸಿದ ದಿನಾಂಕ | 30.01.2026 |
| ವರದಿಯಾದ ದಿನಾಂಕ | 31.01.2026 |
| ಫಿರ್ಯಾದಿದಾರರ ಹೆಸರು | ಚಿಕ್ಕಣ್ಣ .ಬಿ. |
| ಸಾಕ್ಷಿ ವಿಚಾರಣೆ ಪ್ರಾರಂಭಿಸಿದ ದಿನಾಂಕ | 17.08.2026 |
| ಸಾಕ್ಷಿ ವಿಚಾರಣೆ ಮುಗಿಸಿದ ದಿನಾಂಕ | 17.08.2026 |
| ಆರೋಪಗಳು | ಭಾರತೀಯ ನ್ಯಾಯ ಸಂಹಿತೆ ಕಲಂ. 189(2), 191(2), 191(3), 115(2), 118(1), 352, 351(2) ಸಹವಾಚಕ ಕಲಂ. 190 ರಡಿಯಲ್ಲಿ |
| ನ್ಯಾಯಾಧೀಶರು ತೀರ್ಮಾನ | ನಿರ್ದೋಷಿಗಳೆಂದು ಪರಿಗಣಿಸಿದೆ |
| ತೀರ್ಮಾನವಾದ ದಿನಾಂಕ | 19.08.2026 |

**:: ತೀರ್ಪು ::**

ಈ ಪ್ರಸ್ತುತ ಪ್ರಕರಣವನ್ನು ಪೊಲೀಸ್ ಇನ್ಸ್‌ಪೆಕ್ಟರ್, ಮಲೇಬೆನ್ನೂರು ಪೊಲೀಸ್ ಠಾಣೆ, ಮಲೇಬೆನ್ನೂರು ಇವರು ಆರೋಪಿ ಸಂ.1 ರಿಂದ 5 ರವರ ವಿರುದ್ಧ ಭಾರತೀಯ ನ್ಯಾಯ ಸಂಹಿತೆ ಕಲಂ. 1189(2), 191(2), 191(3), 115(2), 118(1), 352, 351(2) ಸಹವಾಚಕ ಕಲಂ.190 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತಾರೆ ಎಂದು ಆರೋಪಿಸಿ ಆರೋಪಿತರ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

**2) ಅಭಿಯೋಜನ ಪಕ್ಷದವರ ಪ್ರಕರಣದ ಸಂಕ್ಷಿಪ್ತ ಸಾರಾಂಶ ಈ ಕೆಳಕಂಡಂತೆ ಇರುತ್ತದೆಃ**

1 ರಿಂದ 5 ನೇ ಆರೋಪಿತರು ಹರಿಹರ ತಾಲ್ಲೂಕ್ ಕುಣಿಬೆಳಕೆರೆ ಗ್ರಾಮದ ವಾಸಿಗಳಾಗಿದ್ದು ತಮ್ಮ ಗ್ರಾಮದ ಹತ್ತಿರ ರಿ.ಸ.ನಂಃ 157/2 ಎ ರಲ್ಲಿ 24 ಗುಂಟೆ ಜಮೀನು ಇದ್ದು, ಸದರಿ ಜಮೀನಿನ ಪಕ್ಕ ಚಾಸಾ.1 ನೇ ರವರ 157/2 ಪಿ2 ರಲ್ಲಿ 37 ಗುಂಟೆ ಜಮೀನಿದ್ದು ಇನ್ನು ಆರೋಪಿತರು ಮತ್ತು ಚಾಸಾ.1 ನೇ ರವರು ಜಮೀನನ್ನು ಹದ್‌ಬಸ್ತ್ ಮಾಡಿಕೊಂಡಿರುವುದಿಲ್ಲ. ಎಲಾ ಜಮೀನು ಪಿತ್ರಾರ್ಜಿತ ಆಸ್ತಿ ಆಗಿರುತ್ತದೆ. ಸದರಿ ಜಮೀನಿನಲ್ಲಿ ಭತ್ತವನ್ನು ಬೆಳೆಯುತ್ತಿದ್ದು, ಇತ್ತೀಚೇಗೆ ಆರೋಪಿತರು ಮತ್ತು ಚಾಸಾ.1 ಮತ್ತು ಅವರ ಕಡೆಯವರ ಮಧ್ಯ ಜಮೀನಿನಲ್ಲಿ ದಿಂಡನ್ನು ತೆಗೆಯುವ ವಿಚಾರದಲ್ಲಿ ಆಗಾಗ ಜಗಳ ಮಾಡುತ್ತಿದ್ದು, ಹೀಗಿರುವಾಗ ದಿನಾಂಕಃ 30.01.2026 ರಂದು ಮಧ್ಯಾಹ್ನ 2.45 ಗಂಟೆ ಸಮಯದಲ್ಲಿ ಚಾಸಾ.1 ಮತ್ತು ಚಾಸಾ.4 ಮತ್ತು ಚಾಸಾ.5 ರವರು ಸೇರಿ

ಜಮೀನಿನಲ್ಲಿ ಕೆಲಸ ಮಾಡುತ್ತಿರುವಾಗ 1 ರಿಂದ 5 ನೇ ಆರೋಪಿತರು ಅಕ್ರಮ ಗುಂಪು ಕಟ್ಟಿಕೊಂಡು ಬಂದು ಚಾಸಾ.1 ಮತ್ತು 4, 5 ನೇ ರವರಿಗೆ ಹೊಡೆಯುವ ಸಮಾನ ಉದ್ದೇಶ ಇಟ್ಟುಕೊಂಡು ಬಂದವರೆ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ಚಾಸಾ.1 ಮತ್ತು ಚಾಸಾ.4, 5 ನೇ ರವರ ಮೇಲೆ ಜಮೀನು ಒತ್ತುವರಿ ಮಾಡಿರುತ್ತೀರಿ ಅಂತಾ ಏಕಾಏಕೀ ಅವರಲ್ಲಿ 1 ಮತ್ತು 2 ನೇ ಆರೋಪಿತ ರವರು ಚಾಸಾ.1 ಮತ್ತು ಚಾಸಾ.4 ನೇ ರವರಿಗೆ ಕಲ್ಲುಗಳಿಂದ ಹಾಗೂ ಕಟ್ಟಿಗೆಗಳಿಂದ ಅವರಿಬ್ಬರ ತಲೆಗೆ ಹೊಡೆದಿದ್ದು, ನಂತರ 3 ರಿಂದ 5 ನೇ ಆರೋಪಿತರವರು ಸೇರಿ ಚಾಸಾ.1 ಮತ್ತು ಚಾಸಾ.5 ನೇ ರವರಿಗೆ ಕಾಲುಗಳಿಂದ ಹೊಡೆದು ಸೂಳೇಮಕ್ಕಳಾ ಜಮೀನನ್ನು ಒತ್ತುವರಿ ಮಾಡುತ್ತೀರಾ ಅಂತ ಅವಾಚ್ಯ ಶಬ್ದಗಳಿಂದ ಬೈದಿದ್ದರಿಂದ ಚಾಸಾ.1 ಮತ್ತು ಚಾಸಾ.4 ನೇ ರವರಿಗೆ ಸಾಮಾನ್ಯ ಸ್ವರೂಪದ ಗಾಯಗಳಾಗಿದ್ದು, ಆರೋಪಿತರು ಚಾಸಾ.1 ಮತ್ತು ಚಾಸಾ.4, 5 ನೇ ರವರಿಗೆ ನಿಮ್ಮನ್ನು ಮಾತ್ರ ಜೀವಂತವಾಗಿ ಉಳಿಸುವುದಿಲ್ಲ ಅಂತಾ ಪ್ರಾಣ ಬೆದರಿಕೆ ಹಾಕಿರುವುದು, ತನಿಖೆಯಿಂದ ದೃಡಪಟ್ಟ ಮೇರೆಗೆ ಆರೋಪಿತರ ವಿರುದ್ಧ ಮೇಲ್ಕಂಡ ಕಲಂಗಳ ಅನ್ವಯ ದೋಷಾರೋಪಣಪಟ್ಟಿ ಸಲ್ಲಿಸಲಾಗಿದೆ.

**3)** ದೋಷಾರೊಪಣಾ ಪತ್ರ ಸ್ವೀಕರಿಸಿದ ನಂತರ ಈ ನ್ಯಾಯಾಲಯವು ಆರೋಪಿತರ ವಿರುದ್ಧ ಸಂಜ್ಞೆಯನ್ನು ತೆಗೆದುಕೊಂಡಿರುತ್ತದೆ. ಆರೋಪಿತರು ವಕೀಲರ ಮುಖಾಂತರ ಜಾಮೀನು ಅರ್ಜಿ ಸಲ್ಲಿಸಿ ನ್ಯಾಯಾಲಯದಿಂದ ಜಾಮೀನು ಪಡೆದುಕೊಂಡಿರುತ್ತಾರೆ. ಭಾರತೀಯ ನ್ಯಾಯ ಸಂಹಿತೆ ಕಲಂ. 230 ರಡಿಯಲ್ಲಿ ತಿಳಿಸಿರುವಂತೆ ಅಭಿಯೋಜನಾ ಕೇಸಿನ ದಾಖಲೆಗಳ ನಕಲುಗಳನ್ನು ಆರೋಪಿತರಿಗೆ ನೀಡಿ,

ದೋಷಾರೋಪಣೆ ರಚಿಸುವ ಪೂರ್ವದಲ್ಲಿ ವಾದ ಕೇಳಿ ನಂತರ, ಅವರ ವಿರುದ್ಧದ ಆರೋಪಣೆಯನ್ನು ತಯಾರಿಸಿ, ಓದಿ ವಿವರಿಸಲಾಗಿ ಆರೋಪಿತರು ತಮ್ಮ ವಿರುದ್ಧದ ಆರೋಪಗಳನ್ನು ಅಲ್ಲಗೆಳೆದಿದ್ದು, ಆರೋಪಗಳು ವಿಚಾರಣೆಯಾಗಲೆಂದು ಕೇಳಿಕೊಂಡ ಮೇರೆಗೆ ಅಧಿವಿಚಾರಣೆ ಮಾಡಲಾಯಿತು.

**4)** ತಮ್ಮ ಪ್ರಕರಣವನ್ನು ಬೆಂಬಲಿಸಿ ಅಭಿಯೋಜನೆಯವರು 03 ಸಾಕ್ಷಿದಾರರನ್ನು ಪ್ರಾ.ಸಾ-01 ರಿಂದ ಪ್ರಾ.ಸಾ-03 ರವರನ್ನು ವಿಚಾರಣೆ ಮಾಡಿ, ಅವರ ಮೂಲಕ ನಿಪಿ-1 ರಿಂದ 5 ದಾಖಲಾತಿಗಳನ್ನು ತಮ್ಮ ಸಾಕ್ಷ್ಯದಲ್ಲಿ ಗುರುತಿಸಿಕೊಂಡಿರುತ್ತಾರೆ ಮತ್ತು ಮು.ಮಾ.1 ರಿಂದ 4 ನ್ನು ತಮ್ಮ ಸಾಕ್ಷ್ಯದಲ್ಲಿ ಗುರುತಿಸಿಕೊಂಡಿರುತ್ತಾರೆ. ಪ್ರಾ.ಸಾ.1 ರಿಂದ ಪ್ರಾ.ಸಾ.3 ರವರು ಅಭಿಯೋಜನೆ ಪ್ರಕರಣಕ್ಕೆ ಪ್ರತಿಕೂಲವಾಗಿ ಸಾಕ್ಷಿ ನುಡಿದಿದ್ದು, ಆರೋಪಿತರ ವಿರುದ್ಧ ಯಾವುದೇ ಸಾಕ್ಷ್ಯ ಕಂಡುಬರದ ಹಿನ್ನಲೆಯಲ್ಲಿ ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ ಕಲಂ. 351 ರಡಿಯಲ್ಲಿ ಆರೋಪಿತರ ಹೇಳಿಕೆಯನ್ನು ದಾಖಲಿಸಿಕೊಳ್ಳುವ ಹಂತವನ್ನು ಕೈಬಿಡಲಾಗಿದೆ.

**5)** ಸರ್ಕಾರದ ಪರವಾಗಿ ಸಹಾಯಕ ಸರ್ಕಾರಿ ಅಭಿಯೋಜಕರು ಹಾಗೂ ಆರೋಪಿತರ ಪರವಾಗಿ ಶ್ರೀ. ಎನ್.ಬಿ., ವಕೀಲರ ವಾದ ಕೇಳಿ ಕಡತದ ಪರಿಶೀಲನೆ ಮಾಡಲಾಗಿ ಈ ಕೆಳಕಂಡ ಅಂಶಗಳು ನನ್ನ ನಿರ್ಣಯಕ್ಕೆ ಬಂದಿರುತ್ತವೆ.

**6)** ಈ ಪ್ರಕರಣದಲ್ಲಿ ನನ್ನ ಪರಿಗಣನೆಗೆ ಈ ಕೆಳಕಂಡ ಅಂಶಗಳು ಉದ್ಭವಿಸುತ್ತವೆಃ

**-:ಅಂಶಗಳು:-**

1. 1 ರಿಂದ 5 ನೇ ಆರೋಪಿತರು ಹರಿಹರ ತಾಲ್ಲೂಕ್ ಕುಣಿಬೆಳಕೆರೆ ಗ್ರಾಮದ ವಾಸಿಗಳಾಗಿದ್ದು, ತಮ್ಮ ಗ್ರಾಮದ ಹತ್ತಿರ ರಿ.ಸ.ನಂ: 157/2 ಎ ರಲ್ಲಿ 24 ಗುಂಟೆ ಜಮೀನು ಇದ್ದು, ಸದರಿ ಜಮೀನಿನ ಪಕ್ಕದಲ್ಲಿ ಚಾಸಾ.1 ರವರ ರಿ.ಸ.ನಂ: 157/2 ಪಿ2 ರಲ್ಲಿ 37 ಗುಂಟೆ ಜಮೀನು ಇರುತ್ತದೆ. ಸದರಿ ಜಮೀನಿನಲ್ಲಿ ಭತ್ತವನ್ನು ಬೆಳೆಯುತ್ತಿದ್ದು, ಇತ್ತೀಚಿಗೆ ಆರೋಪಿತರು ಹಾಗೂ ಚಾಸಾ.1 ರವರ ಜಮೀನಿನ ದಿಂಡನ್ನು ತೆಗೆಯುವ ವಿಚಾರದಲ್ಲಿ ಆಗಾಗ ಜಗಳ ಮಾಡುತ್ತಿರುತ್ತಿರಾ. ದಿನಾಂಕ: 30.01.2026 ರಂದು ಮಧ್ಯಾಹ್ನ 2.45 ಗಂಟೆ ಸಮಯದಲ್ಲಿ ಆರೋಪಿತರು ಕಾನೂನುಬಾಹಿರವಾಗಿ ಅಕ್ರಮ ಗುಂಪು ಕಟ್ಟಿಕೊಂಡು ಚಾಸಾ.1, 4, 5 ರವರ ಜೊತೆ ಜಗಳ ಮಾಡಲು ಹೋಗಿರುತ್ತಾರೆ. ಆ ಮೂಲಕ ಭಾ.ನ್ಯಾ.ಸಂ. ಕಲಂ. 189(2) ಸಹವಾಚಕ ಕಲಂ 190 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತಾರೆ ಎಂಬ ಅಂಶವನ್ನು ಅಭಿಯೋಜನಾ ಪಕ್ಷದವರು ನಿಸ್ಸಂಶಯಾ ತೀತವಾಗಿ ರುಜುವಾತು ಪಡಿಸುತ್ತಾರೆಯೇ?

2. ಅದೇ ರೀತಿ ಮೇಲೆ ಹೇಳಿದ ದಿವಸ ವೇಳೆ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವುಗಳು ಕೃತ್ಯ ಎಸಗುವ ಏಕೋದ್ದೇಶದಿಂದ ಅಕ್ರಮ ಗುಂಪು ಕಟ್ಟಿಕೊಂಡು ಬಂದು ದೊಂಬಿ ಉಂಟು ಮಾಡಿರುತ್ತೀರಿ. ಆ ಮೂಲಕ ಭಾ.ನ್ಯಾ.ಸಂ. ಕಲಂ. 191(2) ಸಹವಾಚಕ ಕಲಂ 190 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತಾರೆ ಎಂಬ ಅಂಶವನ್ನು

ಅಭಿಯೋಜನಾ ಪಕ್ಷದವರು ನಿಸ್ಸಂಶಯಾ ತೀತವಾಗಿ ರುಜುವಾತು ಪಡಿಸುತ್ತಾರೆಯೇ?

3. ಅದೇ ರೀತಿ ಮೇಲೆ ಹೇಳಿದ ದಿವಸ ವೇಳೆ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವುಗಳು ಕೃತ್ಯ ಎಸಗುವ ಏಕೋದ್ದೇಶದಿಂದ ಅಕ್ರಮ ಗುಂಪು ಕಟ್ಟಿಕೊಂಡು ಬಂದು 1 ಮತ್ತು 2 ನೇ ಆರೋಪಿತರಾದ ನೀವು ಚಾಸಾ.1 ಮತ್ತು 4 ರವರ ಜಮೀನು ಒತ್ತುವರಿ ಮಾಡಿರುತ್ತೀರಿ. ಆ ಮೂಲಕ ಭಾ.ನ್ಯಾ.ಸಂ. ಕಲಂ. 191(3) ಸಹವಾಚಕ ಕಲಂ 190 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತಾರೆ ಎಂಬ ಅಂಶವನ್ನು ಅಭಿಯೋಜನಾ ಪಕ್ಷದವರು ನಿಸ್ಸಂಶಯಾ ತೀತವಾಗಿ ರುಜುವಾತು ಪಡಿಸುತ್ತಾರೆಯೇ?

4. ಅದೇ ರೀತಿ ಮೇಲೆ ಹೇಳಿದ ದಿವಸ ವೇಳೆ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವುಗಳು ಕೃತ್ಯ ಎಸಗುವ ಏಕೋದ್ದೇಶದಿಂದ ಅಕ್ರಮ ಗುಂಪು ಕಟ್ಟಿಕೊಂಡು ಬಂದು 3, 4 ಮತ್ತು 5 ನೇ ಆರೋಪಿತರಾದ ನೀವುಗಳು ಚಾಸಾ.5 ರವರಿಗೆ ಕೈ ಕಾಲುಗಳಿಂದ ಹೊಡೆದಿರುತ್ತೀರಾ. ಆ ಮೂಲಕ ಭಾ.ನ್ಯಾ.ಸಂ. ಕಲಂ. 115(2) ಸಹವಾಚಕ ಕಲಂ 190 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತಾರೆ ಎಂಬ ಅಂಶವನ್ನು ಅಭಿಯೋಜನಾ ಪಕ್ಷದವರು ನಿಸ್ಸಂಶಯಾ ತೀತವಾಗಿ ರುಜುವಾತು ಪಡಿಸುತ್ತಾರೆಯೇ?

5. ಅದೇ ರೀತಿ ಮೇಲೆ ಹೇಳಿದ ದಿವಸ ವೇಳೆ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವುಗಳು ಕೃತ್ಯ ಎಸಗುವ ಏಕೋದ್ದೇಶದಿಂದ ಅಕ್ರಮ ಗುಂಪು ಕಟ್ಟಿಕೊಂಡು ಬಂದು 1 ಮತ್ತು 2 ನೇ ಆರೋಪಿತರಾದ ನೀವು ಚಾಸಾ.1 ಮತ್ತು 4 ರವರಿಗೆ ಜಮೀನು ಒತ್ತುವರಿ ಮಾಡಿರುತ್ತೀರಿ ಅಂತಾ

ಕಲ್ಲುಗಳಿಂದ ಅವರಿಬ್ಬರ ತಲೆಗೆ ಹೊಡೆದಿರುತ್ತೀರಿ. ಆ ಮೂಲಕ ಭಾ.ನ್ಯಾ.ಸಂ. ಕಲಂ. 118(1) ಸಹವಾಚಕ ಕಲಂ 190 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತಾರೆ ಎಂಬ ಅಂಶವನ್ನು ಅಭಿಯೋಜನಾ ಪಕ್ಷದವರು ನಿಸ್ಸಂಶಯಾತೀತವಾಗಿ ರುಜುವಾತು ಪಡಿಸುತ್ತಾರೆಯೇ?

6. ಅದೇ ರೀತಿ ಮೇಲೆ ಹೇಳಿದ ದಿವಸ ವೇಳೆ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವುಗಳು ಕೃತ್ಯ ಎಸಗುವ ಏಕೋದ್ದೇಶದಿಂದ ಅಕ್ರಮ ಗುಂಪು ಕಟ್ಟಿಕೊಂಡು ಬಂದು ಚಾಸಾ.1 ಮತ್ತು 5 ರವರಿಗೆ ಸೂಳೇಮಕ್ಕಳಾ ಜಮೀನನ್ನು ಒತ್ತುವರಿ ಮಾಡುತ್ತೀರಾ ಅಂತಾ ಅವಾಚ್ಯ ಶಬ್ದಗಳಿಂದ ಬೈದಿರುತ್ತೀರಿ. ಆ ಮೂಲಕ ಭಾ.ನ್ಯಾ.ಸಂ. ಕಲಂ. 352 ಸಹವಾಚಕ ಕಲಂ 190 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತಾರೆ ಎಂಬ ಅಂಶವನ್ನು ಅಭಿಯೋಜನಾ ಪಕ್ಷದವರು ನಿಸ್ಸಂಶಯಾ ತೀತವಾಗಿ ರುಜುವಾತು ಪಡಿಸುತ್ತಾರೆಯೇ?

7. ಅದೇ ರೀತಿ ಮೇಲೆ ಹೇಳಿದ ದಿವಸ ವೇಳೆ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವುಗಳು ಕೃತ್ಯ ಎಸಗುವ ಏಕೋದ್ದೇಶದಿಂದ ಅಕ್ರಮ ಗುಂಪು ಕಟ್ಟಿಕೊಂಡು ಬಂದು ಚಾಸಾ.1, 4 ಮತ್ತು ಚಾಸಾ.5 ರವರಿಗೆ ನಿಮ್ಮನ್ನು ಮಾತ್ರಾ ಜೀವಂತವಾಗಿ ಉಳಿಸುವುದಿಲ್ಲ ಅಂತಾ ಪ್ರಾಣ ಬೆದರಿಕೆ ಹಾಕಿರುತ್ತೀರಿ. ಆ ಮೂಲಕ ಭಾ.ನ್ಯಾ.ಸಂ. ಕಲಂ. 351(2) ಸಹವಾಚಕ ಕಲಂ 190 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತಾರೆ ಎಂಬ ಅಂಶವನ್ನು ಅಭಿಯೋಜನಾ ಪಕ್ಷದವರು ನಿಸ್ಸಂಶಯಾ ತೀತವಾಗಿ ರುಜುವಾತು ಪಡಿಸುತ್ತಾರೆಯೇ?

8. ಏನು ಆದೇಶ ಅಥವಾ ಶಿಕ್ಷೆ?

**7)** ಅಭಿಯೋಜನಾ ಪರ ಹಾಜರು ಪಡಿಸಲಾದಂತಹ ಮೌಖಿಕ ಸಾಕ್ಷ್ಯಗಳನ್ನು ದಾಖಲೆಗಳನ್ನು ಮತ್ತು ಉಭಯ ಪಕ್ಷಗಳ ಪರ ಮಾನ್ಯ ವಕೀಲರುಗಳ ವಾದವನ್ನು ಸಂಪೂರ್ಣವಾಗಿ ಪರಿಗಣಿಸಿ ಮೇಲಿನ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸಲಾಗಿದೆ.

**ಅಂಶ.1 ರಿಂದ 7 - ನಕಾರಾತ್ಮಕವಾಗಿ**
**ಅಂಶ.8 - ಅಂತಿಮ ಆದೇಶನುಸಾರವಾಗಿ**

**:ಕಾರಣಗಳು:**

**8)** **ಅಂಶ 1 ರಿಂದ 7 :-** ಅಂಶ 1 ರಿಂದ 7 ಇವು ಒಂದನ್ನೊಂದು ಅವಲಂಬಿಸಿದ್ದು, ಇವುಗಳನ್ನು ಉತ್ತರಿಸುವಾಗ ಒಂದೇ ರೀತಿಯಾದಂತಹ ಚರ್ಚೆ ಹಾಗೂ ವಿಮರ್ಶೆ ಅವಶ್ಯಕತೆ ಇರುತ್ತದೆ. ಆದ್ದರಿಂದ ಅವುಗಳ ಪುನರಾವರ್ತನೆಯನ್ನು ತಪ್ಪಿಸುವ ಸಲುವಾಗಿ ಅವುಗಳನ್ನು ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಗಿರುತ್ತದೆ. ಅಭಿಯೋಜನೆಯವರು ಆರೋಪಿತರ ಮೇಲಿನ ಆರೋಪಗಳನ್ನು ಸಾಭೀತುಪಡಿಸಲು ಪ್ರಾ.ಸಾ.**01** ರಿಂದ **03** ರವರನ್ನು ವಿಚಾರಣೆ ಮಾಡಿ, ಅವರ ಮೂಲಕ ನಿಪಿ-**01** ರಿಂದ **05** ರ ದಾಖಲಾತಿಗಳನ್ನು ತಮ್ಮ ಸಾಕ್ಷ್ಯದಲ್ಲಿ ಗುರುತಿಸಿಕೊಂಡಿರುತ್ತಾರೆ ಹಾಗೂ ಮು.ಮಾ.1 ರಿಂದ 4 ನ್ನು ತಮ್ಮ ಸಾಕ್ಷ್ಯದಲ್ಲಿ ಗುರುತಿಸಿಕೊಂಡಿರುತ್ತಾರೆ.

**9)** ಚಾಸಾ.1/ಪ್ರಾಸಾ.1 ರವರು ದೂರುದಾರರಾಗಿದ್ದು ಹಾಗೂ ಚಾಸಾ.4/ಪ್ರಾಸಾ.2, ಚಾಸಾ.5/ಪ್ರಾಸಾ.3, ರವರು ಗಾಯಾಳು ಸಾಕ್ಷಿದಾರರಾಗಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ತಮಗೆ ಪ್ರಕರಣದ ಬಗ್ಗೆ ಮಾಹಿತಿ ಇರುವುದಿಲ್ಲ. ಆರೋಪಿತರು ತಮಗೆ ಹೊಡೆದಿರುವುದಿಲ್ಲ. ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ.

ಚಾಸಾ.1 ರವರು ಠಾಣೆಗೆ ಹೋದಾಗ ಪೊಲೀಸರು ದಾಖಲೆಗಳಿಗೆ ಸಹಿ ಪಡೆದಿರುತ್ತಾರೆ. ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ. ಇವರ ಈ ಸಾಕ್ಷ್ಯವು ಅಭಿಯೋಜನೆಯ ಪ್ರಕರಣಕ್ಕೆ ಪ್ರತಿಕೂಲವಾಗಿರುವುದರಿಂದ ಮತ್ತು ಸದರಿ ಸಾಕ್ಷಿದಾರರು ಅಭಿಯೋಜನೆಯನ್ನು ಬೆಂಬಲಿಸದ ಕಾರಣ ಸಹಾಯಕ ಸರ್ಕಾರಿ ಅಭಿಯೋಜಕರವರು ಪಾಟೀಸವಾಲಿಗೊಳಪಡಿಸಿದ್ದು, ಪಾಟೀಸವಾಲಿನಲ್ಲಿ ಅಭಿಯೋಜನೆಗೆ ಸಹಾಯಕವಾಗುವಂತಹ ಯಾವುದೇ ಸಂಗತಿಗಳು ಕಂಡುಬಂದಿರುವುದಿಲ್ಲ. ಬದಲಾಗಿ ಇವರು ಆರೋಪಿತರೊಂದಿಗೆ ರಾಜೀ ಮಾಡಿಕೊಂಡಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ.

**10)** ಈ ಪ್ರಕರಣದಲ್ಲಿ ಗಮನಿಸಬೇಕಾದ ಪ್ರಮುಖ ಅಂಶಗಳೇನೆಂದರೆ, ಈ ಪ್ರಕರಣದ ಪ್ರಾ.ಸಾ.1 ಫಿರ್ಯಾದಿದಾರರು ಮತ್ತು ಪ್ರಾ.ಸಾ.2 ಮತ್ತು ಪ್ರಾ.ಸಾ.3 ರವರು ಗಾಯಾಳು ಸಾಕ್ಷಿದಾರರು ಅಭಿಯೋಜನೆಯನ್ನು ಬೆಂಬಲಿಸಿರುವುದಿಲ್ಲ, ಪ್ರಾಸಾ.1 ರಿಂದ ಪ್ರಾಸಾ.3 ರವರು ಪ್ರತಿಕೂಲವಾಗಿ ಸಾಕ್ಷಿ ನುಡಿದ ಕಾರಣ ಅಭಿಯೋಜನೆಯು ಇವರುಗಳನ್ನು ಪಾಟೀಸವಾಲಿಗೊಳಪಡಿಸಿದ್ದು, ಪಾಟೀಸವಾಲಿನಲ್ಲಿ ಅಭಿಯೋಜನೆಗೆ ಸಹಾಯಕವಾಗುವಂತಹ ಯಾವ ಸಂಗತಿಗಳು ಹೊರಬಂದಿರುವುದಿಲ್ಲ. ಬದಲಾಗಿ ಇವರು ಆರೋಪಿಗಳೊಂದಿಗೆ ಪರಸ್ಪರ ರಾಜೀ ಮಾಡಿಕೊಂಡಿರುವುದಾಗಿ ಒಪ್ಪಿರುತ್ತಾರೆ. ಹೀಗೆ ರಾಜೀ ಮಾಡಿಕೊಂಡ ಹಿನ್ನೆಲೆಯಲ್ಲಿ ಆರೋಪಿಗಳ ಹಿತಾಸಕ್ತಿಗೆ ವಿರುದ್ಧವಾದ ಯಾವುದೇ ಸಾಕ್ಷ್ಯ ಹೇಳಿಕೆ ಕಂಡು ಬಂದಿರುವುದಿಲ್ಲ. ಈ ಸಾಕ್ಷಿದಾರರುಗಳನ್ನು ಹೊರತಾಗಿ ಉಳಿದ ಎಲ್ಲಾ ಸಾಕ್ಷಿದಾರರನ್ನು ವಿಚಾರಣೆ ಮಾಡುವುದರಿಂದ ಆರೋಪಿತರ ಮೇಲಿನ ಆರೋಪಗಳನ್ನು ಸಂಶಯಾತೀತವಾಗಿ

ಸಾಭೀತುಪಡಿಸುವ ಯಾವುದೇ ಸಾಧ್ಯತೆಗಳು ಇಲ್ಲದ ಕಾರಣ ನ್ಯಾಯಾಲಯವು ಉಳಿದ ಸಾಕ್ಷಿದಾರರ ವಿಚಾರಣೆಯನ್ನು ಕೈಬಿಟ್ಟಿರುತ್ತದೆ. ಈ ಪ್ರಕರಣದ ಪ್ರಮುಖ ಸಾಕ್ಷಿದಾರರ ಪ್ರತಿಕೂಲ ಸಾಕ್ಷ್ಯದಿಂದ ಅಭಿಯೋಜನೆಯು ಆರೋಪಿಗಳ ಮೇಲಿನ ಆರೋಪಗಳನ್ನು ಸಂಶಯಾತೀತವಾಗಿ ಸಾಭೀತುಪಡಿಸುವಲ್ಲಿ ವಿಫಲವಾಗಿದೆ. ಆದ್ದರಿಂದ **ಅಂಶ.1 ರಿಂದ 7 ನ್ನು "ನಕಾರಾತ್ಮಕವಾಗಿ"** ಉತ್ತರಿಸುತ್ತೇನೆ.

**11) <u>ಅಂಶ 8</u> :-** ಈಗಾಗಲೇ ಈ ಮೇಲಿನ ಅಂಶ 1 ರಿಂದ 7 ನ್ನು **ನಕಾರಾತ್ಮಕವಾಗಿ** ಉತ್ತರಿಸಿರುವುದರಿಂದ, ಈ ಕೆಳಕಂಡಂತೆ ಆದೇಶಿಸಲಾಗಿದೆ.

**: ಆದೇಶ :**

ಭಾರತೀಯ ನಾಗರೀಕಾ ಸುರಕ್ಷಾ ಸಂಹಿತೆ 271(1) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಆರೋಪಿತರನ್ನು ಭಾರತೀಯ ನ್ಯಾಯ ಸಂಹಿತೆ ಕಲಂ.189(2), 191(2), 191(3), 115(2), 118(1), 352, 351(2) ಸಹವಾಚಕ ಕಲಂ. 190 ರಡಿಯಲ್ಲಿನ ಅಪರಾಧಗಳಿಂದ ಆರೋಪಿತನನ್ನು ದೋಷಮುಕ್ತಗೊಳಿಸಿ ಬಿಡುಗಡೆ ಮಾಡಲಾಗಿದೆ.

ಆರೋಪಿತರು ಜಾಮೀನಿನ ಮೇಲೆ ಬಿಡುಗಡೆಯಾಗಿರುವುದರಿಂದ ಸದರಿಯವರ ಮುಚ್ಚಳಿಕೆ ಮತ್ತು ಭದ್ರತೆಗಳನ್ನು ರದ್ದು ಮಾಡಲಾಗಿದೆ.

ಆರೋಪಿತರು ನ್ಯಾಯಾಲಯದ ಇಚ್ಚೆಯಂತೆ ಉನ್ನತ ನ್ಯಾಯಾಲಯದ ಮುಂದೆ ಈ ತೀರ್ಪಿನ ವಿರುದ್ಧ ಮೇಲ್ಮನವಿ ಅಥವಾ ಯಾವುದೇ ಅರ್ಜಿಯ ಸಮಯದಲ್ಲಿ ತಿಳುವಳಿಕೆ ಪಡೆದ ನಂತರ ಹಾಜರಾಗಲು ತಲಾ 50,000/- ಮುಚ್ಚಳಿಕೆ ಬರೆದುಕೊಟ್ಟಿದ್ದು ಈ ಮುಚ್ಚಳಿಕೆಯು ಮುಂದಿನ ಆರು ತಿಂಗಳ

ಅವಧಿಯವರೆಗೆ ಭಾರತೀಯ ನಾಗರೀಕಾ ಸುರಕ್ಷಾ ಸಂಹಿತೆ 481 ರಡಿಯಲ್ಲಿ ಜಾರಿಯಲ್ಲಿರುತ್ತದೆ.

ಈ ಪ್ರಕರಣದಲ್ಲಿ ಅಮಾನತ್ತು ಪಡಿಸಿಕೊಂಡಿರುವ ಎಂ.ಓ.-1 ರಿಂದ 4 ಬೆಲೆ ಬಾಳದ ವಸ್ತುಗಳು ಆಗಿರುವುದರಿಂದ ಮೇಲ್ಮನವಿಯ ಅವಧಿ ಮುಗಿದ ನಂತರ ಅದನ್ನು ನಾಶಪಡಿಸಲು ಆದೇಶಿಸಲಾಗಿದೆ.

(ಶೀಘ್ರಲಿಪಿಗಾರರು ನನ್ನ ಉಕ್ತಲೇಖನಕ್ಕೆ ನೇರವಾಗಿ ಗಣಕೀಕರಿಸಿದ್ದು ಸೂಕ್ತ ತಿದ್ದುಪಡಿಗಳನ್ನು ಮಾಡಿದ ನಂತರ ತೆರೆದ ನ್ಯಾಯಾಲಯದಲ್ಲಿ ಇಂದು ದಿ: **19 ನೇ ಆಗಸ್ಟ್, 2026** ರಂದು ತೀರ್ಪನ್ನು ಘೋಷಿಸಲಾಯಿತು)

KAMBLI BIRAPPA CHANNAPPA
Digitally signed by KAMBLI BIRAPPA CHANNAPPA
Date: 2026.08.20 18:18:17 +0530

**(ಶ್ರೀ ಬೀರಪ್ಪ ಕಾಂಬ್ಳೆ,)**

**C/c 2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**

**ಪ್ರ.ದ.ನ್ಯಾ.ದಂ.ನ್ಯಾಯಾಲಯ, ಹರಿಹರ.**

**:ಅನುಬಂಧ:**

**1:ಅಭಿಯೋಜನೆಯವರ ಪರ ಸಾಕ್ಷಿದಾರರ ಪಟ್ಟಿ -**

ಪ್ರಾ.ಸಾ.1- ಚಿಕ್ಕಣ್ಣ

ಪ್ರಾ.ಸಾ.2- ಗಿರೀಶ

ಪ್ರಾ.ಸಾ.3- ರೀಶ

**2:ಅಭಿಯೋಜನೆಯವರ ಪರ ದಾಖಲೆಗಳ ಪಟ್ಟಿ -**

ನಿ.ಪಿ.1 : ದೂರು,

ನಿ.ಪಿ.1(ಎ) : ಪ್ರಾ.ಸಾ.1 ರವರ ಸಹಿ,

ನಿ.ಪಿ.2 : ಕೃತ್ಯ ಸ್ಥಳ ಮತ್ತು ಅಮಾನತ್ತು ಪಂಚನಾಮೆ,

ನಿ.ಪಿ.2(ಎ) : ಪ್ರಾ.ಸಾ.1 ರವರ ಸಹಿ,

ನಿ.ಪಿ.3 : ಛಾಯಚಿತ್ರ,

ನಿ.ಪಿ.4 : ಪ್ರಾಸಾ.2 ರವರ ಹೇಳಿಕೆ,

ನಿ.ಪಿ.5 : ಪ್ರಾಸಾ.3 ರವರ ಹೇಳಿಕೆ.

**3: ಅಭಿಯೋಜನೆಯವರ ಪರ ಮುದ್ದೆಮಾಲುಗಳ ಪಟ್ಟಿ -**

ಮು.ಮಾ.1&2 : 2 ಹಿಡಿ ಗಾತ್ರದ ಕಾಡು ಜಾತಿಯ ಕಟ್ಟಿಗೆಗಳು

ಮು.ಮಾ.3&4 : 2 ಕಲ್ಲುಗಳು

**4: ಆರೋಪಿತರ ಪರ ವಿಚಾರಣೆ ಮಾಡಿದ ಸಾಕ್ಷಿದಾರರು-ಇಲ್ಲ**

**5: ಆರೋಪಿತರ ಪರ ದಾಖಲೆಗಳ ಪಟ್ಟಿ -ಇಲ್ಲ**

KAMBLI BIRAPPA CHANNAPPA
Digitally signed by KAMBLI BIRAPPA CHANNAPPA
Date: 2026.08.20 18:18:25 +0530

**(ಶ್ರೀ ಬೀರಪ್ಪ ಕಾಂಬ್ಳೆ,)**

**C/c 2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**

**ಪ್ರ.ದ.ನ್ಯಾ.ದಂ.ನ್ಯಾಯಾಲಯ, ಹರಿಹರ.**